ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್**

**ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ**

ಸಂಖ್ಯೆ : ಗ್ರಾಅಪ/ರಾನೀನೈಮಿ/ಎನ್‌ಬಿಎ/85/2012-13/713. ದಿನಾಂಕ :16.04.2014

**ರವರಿಗೆ,**

ನಿರ್ದೇಶಕರು
ಸಾಮಾಜಿಕ ಪರಿಶೋಧನ ನಿರ್ದೇಶನಾಲಯ
ಗ್ರಾ ಅ ಮತ್ತು ಪಂ ರಾಜ್ ಇಲಾಖೆ
ವಿಕಾಸ ಸೌಧ, ಬೆಂಗಳೂರು.

**ಮಾನ್ಯರೆ,**

**ವಿಷಯ:** ಸಾಮಾಜಿಕ ಪರಿಶೋಧನೆ ಕಾರ್ಯವನ್ನು ಪೂರ್ಣಗೊಳಿಸಿ ವರದಿ ಸಲ್ಲಿಸುವ ಕುರಿತು

**ಉಲ್ಲೇಖ:** 1) ಪತ್ರ ಸಂಖ್ಯೆ:ಗ್ರಾಅಪ/ರಾನೀನೈಮಿ/ಎನ್‌ಬಿಎ/85/677/2012-13,ದಿನಾಂಕ,01.04.2014

-----

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಮಲ ಭಾರತ ಅಭಿಯಾನ ಯೋಜನೆಯಡಿ, 2013-14ನೇ ಸಾಲಿನಲ್ಲಿ ಜಿಲ್ಲೆಗಳು ಸಾಧಿಸಿರುವ ಗೃಹ ಶೌಚಾಲಯಗಳ ಭೌತಿಕ ಪರಿಶೀಲನೆ ಮಾಡುವ ಉದ್ದೇಶದಿಂದ ನಡೆಸುತ್ತಿರುವ ಸಾಮಾಜಿಕ ಪರಿಶೋಧನೆ ಕಾರ್ಯವನ್ನು ದಿನಾಂಕ 10.04.2014ರ ಒಳಗಾಗಿ ಪೂರ್ಣಗೊಳಿಸಿ ಅದರ ಕ್ರೂಢೀಕೃತ ದತ್ತಾಂಶಗಳನ್ನು ಪಂಚತಂತ್ರದಲ್ಲಿ ಇಂದಿಕರಿಸಿ, ರಾಜ್ಯ ಕಚೇರಿಗೆ ವರದಿ ನೀಡುವಂತೆ ಉಲ್ಲೇಖ (1)ರನ್ವಯ ತಿಳಿಸಲಾಗಿತ್ತು, ಆದರೆ ಇಲ್ಲಿವರೆಗೆ ಶೇ.86ರಷ್ಟು ಮಾತ್ರ ಪ್ರಗತಿ ಸಾಧಿಸಿದ್ದು ಇನ್ನು ಶೇ.14ರಷ್ಟು ಪಲಾನುಭವಿಗಳ ವಿವರವನ್ನು ಪಂಚತಂತ್ರದಲ್ಲಿ ದಾಖಲಿಸಬೇಕಾಗಿರುತ್ತದೆ.

ಈ ಹಿನ್ನೆಯಲ್ಲಿ ಎಲ್ಲಾ ಜಿಲ್ಲೆಗಳು ಸಾಮಾಜಿಕ ಪರಿಶೋಧನೆ ಕಾರ್ಯವನ್ನು ಪೂರ್ಣಗೊಳಿಸಿ, ಅದರ ದತ್ತಾಂಶಗಳನ್ನು ಪಂಚತಂತ್ರದಲ್ಲಿ ದಾಖಲಿಸಿ, ಅದರ ಕ್ರೂಢೀಕೃತ ವರದಿಯನ್ನು ಹಾಗೂ ಈ ಕಾರ್ಯಕ್ಕಾಗಿ ನೀಡಿರುವ ಅನುದಾನಕ್ಕೆ ಸಂಬಂಧಿಸಿದಂತೆ, ಹಣ ಬಳಕೆ ಪ್ರಮಾಣ ಪತ್ರವನ್ನು ರಾಜ್ಯ ಕಚೇರಿಗೆ ವರದಿ ನೀಡುವಂತೆ ಅಗತ್ಯ ಕ್ರಮವಹಿಸಬೇಕಾಗಿ ಈ ಮೂಲಕ ತಿಳಿಸಲು ನಿರ್ದೇಶಿತಳಾಗಿರುತ್ತೇನೆ

ತಮ್ಮ ವಿಶ್ವಾಸಿ

ಮಿಷನ್ ನಿರ್ದೇಶಕರ ಪರವಾಗಿ
ರಾಜ್ಯ ನೀರು & ನೈರ್ಮಲ್ಯ ಮಿಷನ್ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು
ಗ್ರಾ ಅ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು:-**

1. ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತಕಾರ್ಯದರ್ಶಿಯವರ ಮಾಹಿತಿಗಾಗಿ.

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು - 560 009.
ದೂರವಾಣಿ ಸಂ.22221861-62 : - ಫ್ಯಾಕ್ಸ್ :-22221862 E-mail : wsrdpr@gmail.com.